ANNOUNCEMENT

MR SPEAKER.-- I have received the following message from the Chairman, Legislative Council.

"As required by Rule 106 of the Rules of Procedure and Conduct of Business in the Karnataka Legislative Council, I send herewith the following Bills which have been agreed to by the Legislative Council on 25th November, 1982 without amendments.

1. THE KARNATAKA LAND REFORMS (SECOND AMENDMENT) BILL, 1982

2. THE BANGALORE DEVELOPMENT AUTHORITY(AMENDMENT) BILL, 1982.

(2) I have received a letter dated 24th November, 1982 from Sri C. Rudrappa, Member Legislative Assembly an independent Member stating that he joined to Congress (I) Legislature Party. The Leader of the Congress-I Party has informed that Sri C. Rudrappa has been admitted to their Party.

ನಿಲುವಳಿ ಸೂಚನೆ

ಪತ್ರಿಕೆಗಳಲ್ಲಿ ಸಭೆಯಲ್ಲಿ ನಡೆದಂಥ ಕಾರ್ಯಕಲಾಪಗಳ ವರದಿಯ ಬಗ್ಗೆ

ಶ್ರೀ ಎ. ಲಕ್ಷ್ಮೀಸಾಗರ್.— ಈ ದಿನ ನಾನೊಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ನಮ್ಮ ಸಭೆಯ ಅಧಿನಿಯಮದ ೫೦ನೇ ನಿಯಮದ ಪ್ರಕಾರ ಈ ಸೂಚನೆಯನ್ನು ನಾನು ತಮಗೆ ಸಲ್ಲಿಸಿದ್ದೇನೆ. ಇದರ ಬಗ್ಗೆ ನಾನು ಎರಡೇ ಎರಡು ವಾಕ್ಯಗಳನ್ನು ಮಾತ್ರ ಇಲ್ಲಿ ಹೇಳಬಯಸ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಕೊಟ್ಟಿರುವ ವಿಷಯ ನಿಲುವಳಿ ಸೂಚನೆಯಾಗುತ್ತದೆಯೇ ಎನ್ನುವುದನ್ನು ನೋಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ವಿಷಯವನ್ನವಲಂಬಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.— ತಾವು ತಮ್ಮ ನೋಟೀಸ್‌ನಲ್ಲಿ ಬರೆದಿರುವುದೂ ಕೂಡ ಪತ್ರಿಕಾವರದಿಯನ್ನು ಆಧಾರವಾಗಿಟ್ಟುಕೊಂಡು. ಅದಕ್ಕಿಂತ ಮಿಗಿಲಾಗಿ ತಾವು ಪ್ರೊಸೀಡಿಂಗ್ಸ್ ಕಾಪಿಯನ್ನು ತರಿಸಿಕೊಂಡು ನೋಡಿದ್ದರೆ ಚೆನ್ನಾಗಿರುತ್ತಿತ್ತು. Instead of depending upon the Press... Supposing a Bill is there, would it be an adjournment motion ?

SRI A. LAKSHMISAGAR.-- I am not on that point. At that level of discussion...

MR. SPEAKER.— To straighten the record...

ಶ್ರೀ ಎ. ಲಕ್ಷ್ಮೀಸಾಗರ್.— ಅವರು ಏನು ಹೇಳಿದರು ಆ ತರಹ ಬಂದರೆ, ನಾವು ಈ ನಿಲುವಳಿ ಸೂಚನೆಯನ್ನು ತರುವಂಥ ಪರಿಸ್ಥಿತಿ ಬರುತ್ತದೆ. ಅವರ ಮಾತಿನ ಸರಣಿಯು ಹಿಂದೆ ಇರತಕ್ಕದ್ದು ಅವರ ಮನಸ್ಸನ್ನು ತೋರಿಸುತ್ತದೆ. ಇದನ್ನು ನಾವು ತಿಳಿದು ಸುಮ್ಮನೆ ಇರುವುದಕ್ಕಾಗುವುದಿಲ್ಲ. ಅದಕ್ಕೆ ನಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡದಿದ್ದರೆ ನಮ್ಮ ಕಡೆಯಿಂದ ತಪ್ಪಾಗುತ್ತದೆ.

ಅಧ್ಯಕ್ಷರು.-- ಅದನ್ನು ತಾವು ಮಾಡಬಹುದು.